

## ಮನವಿ...

**ಬೆಂಗಳೂರು:** ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಆಯೋಗದ ಸದಸ್ಯರಾದ ವೆಂಕಟೇಶ್ ದೊಡ್ಡೇರಿ ಅವರು ದೇವನಹಳ್ಳಿ ತಾಲ್ಲೂಕಿನ ಬೀರಸಂದ್ರ ಗ್ರಾಮದ ಬೆಂಗಳೂರು ಗ್ರಾಮಾಂತರ ಜಿಲ್ಲಾಡಳಿತ ಭವನದಲ್ಲಿರುವ ಜಿಪಂ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕಚೇರಿಯಲ್ಲಿ ಬೆಂಗಳೂರು ಗ್ರಾಮಾಂತರ ಜಿಪಂಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಂ.ಆರ್.ರವಿಕುಮಾರ್ ಅವರನ್ನು ಭೇಟಿ ಮಾಡಿ, ತ್ಯಾಮಗೊಂಡ್ಲು ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೇರಿಸುವಂತೆ ಹಾಗೂ ಗ್ರಾಪಂ ಕಟ್ಟಡ ಕಾಮಗಾರಿ ಪೂರ್ಣಗೊಂಡಿದ್ದು, ಗ್ರಾಪಂ ಆಡಳಿತಕ್ಕೆ ಹಸ್ತಾಂತರಿಸಲು ಸೂಚಿಸುವಂತೆ ಮನವಿ ಮಾಡಿದರು. ಮಂಡಲ ಪಂಚಾಯಿತಿಯ ಮಾಜಿ ಸದಸ್ಯರಾದ ಹನುಮಂತರಾಜ್ ಮತ್ತು ಹೇಮಣ್ಣ ಉಪಸ್ಥಿತರಿದ್ದರು.



## ಆಹಾರ ಕಿಟ್ ವಿತರಣೆ...

**ಪೀಣ್ಯ ದಾಸರಹಳ್ಳಿ:** ಆರ್. ಮಂಜುನಾಥ ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ 1100 ಆಟೋ ಚಾಲಕರು ಹಾಗೂ ಕ್ಯಾಬ್ ಚಾಲಕರಿಗೆ ಆಹಾರ ಕಿಟ್ ಸಾಮಗ್ರಿಗಳನ್ನು ವಿತರಿಸಿದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಶಾಸಕರು, ಕೋವಿಡ್ ಸಂದರ್ಭದಲ್ಲಿ ಲಾಕ್ ಡೌನ್ ಮಾಡಿದ ಕಾರಣ ಹಲವು ಕುಟುಂಬಗಳು ಜೀವನ ನಿರ್ವಹಣೆ ಮಾಡುವುದು ದುಸ್ತರವಾಗಿತ್ತು. ನಾವು ಕೊಡುವುದು ಶಾಶ್ವತವಲ್ಲ ನಿಮ್ಮ ಪ್ರಾಮಾಣಿಕ ದುಡಿಮೆಯ ಶಾಶ್ವತ. ಬಡವರಿಗಾಗಿ ಇರುವ ಸರ್ಕಾರದ ಯೋಜನೆಗಳನ್ನ, ಸಮರ್ಪಕವಾಗಿ ತಲುಪಿಸುವುದು ನನ್ನ ಮೊದಲ ಆದ್ಯತೆ ಎಂದು ಈ ಸಂದರ್ಭದಲ್ಲಿ ತಿಳಿಸಿದರು.

ಇದೇ ಸಂದರ್ಭದಲ್ಲಿ ಜೆಡಿಎಸ್ ಅಧ್ಯಕ್ಷರಾದ ಮುನಿಸ್ವಾಮಣ್ಣ, ಕೆ ಸಿ ವೆಂಕಟೇಶ್, ಚರಣ್ ಗೌಡ, ಎಚ್ ಎನ್ ಗಂಗಾಧರ್,ವಾರ್ಡ್ ಅಧ್ಯಕ್ಷರುಗಳಾದ ತಮ್ಮಣ್ಣ, ಎಚ್ ಎಸ್ ಪ್ರಕಾಶ್, ಸಿ ಜೆ ರಮೇಶ್, ರುದ್ರೇಗೌಡ,ವರದರಾಜು, ಹನುಮಂತರಾಜು, ಗೋಪಾಲ್, ಗೋವಿಂದಪ್ಪ, ಪುಟ್ಟಸ್ವಾಮಿ, ಜಯಣ್ಣ, ಸ್ಥಳೀಯ ಮುಖಂಡರು ಹಾಗೂ ಕಾರ್ಯಕರ್ತರು ಹಾಜರಿದ್ದರು.



# ನಂದಿ ಬೆಟ್ಟ ವೀಕ್ಷಣೆಗೆ ನೂತನ ನಿಯಮ ಪಾಲನೆ ಕಡ್ಡಾಯ

**ಚಿಕ್ಕಬಳ್ಳಾಪುರ:** ಪರಿಸರ ಸಂರಕ್ಷಣೆ, ವಾಹನ ದಟ್ಟಣೆ ಹಾಗೂ ಜನಸಂದಣಿ ನಿಯಂತ್ರಿಸುವ ಉದ್ದೇಶ ದಿಂದ ಜುಲೈ 19 ರಿಂದ ನಂದಿಬೆಟ್ಟದ ವಾಹನ ನಿಲ್ದಾಣದಲ್ಲಿನ ವಾಹನ ನಿಲುಗಡೆ ಸಾಮರ್ಥ್ಯಕ್ಕನು ಗುಣವಾಗಿ ಪ್ರವಾಸಿಗರ ಬೇಟಿಗೆ ಅವಕಾಶ ನೀಡ ಲಾಗುವುದು. ಸಪ್ತಗಿರಿಗಳ ಧಾಮ, ಸಪ್ತ ನದಿಗಳ ಉಗಮ ಸ್ಥಾನವಾದ ನಂದಿಬೆಟ್ಟವನ್ನು ವೀಕ್ಷಿಸಲು ಜಿಲ್ಲಾಡಳಿತ ರೂಪಿಸಲಿರುವ ನೂತನ ನಿಯಮ ಗಳನ್ನು ಪಾಲಿಸಬೇಕು ಎಂದು ಜಿಲ್ಲಾಧಿಕಾರಿ ಆರ್.ಲತಾ ರವರು ಸಾರ್ವಜನಿಕರಲ್ಲಿ ಮನವಿ ಮಾಡಿದರು.

ಜಿಲ್ಲಾಡಳಿತ ಭವನದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೋವಿಡ್ –19 ಲಾಕ್ ಡೌನ್ ಪ್ರಯುಕ್ತ ಏಪ್ರಿಲ್ 27 ರಿಂದ ಜಾರಿಯಲ್ಲಿದ್ದ ನಿರ್ಬಂಧವನ್ನು ತೆರೆವುಗೊಳಿಸಿ ಜೂನ್ 21 ರಿಂದ ನಂದಿಬೆಟ್ಟಕ್ಕೆ ಬೆಳಿಗ್ಗೆ 6 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಸಾರ್ವಜನಿಕರಿಗೆ ಮುಕ್ತ ಪ್ರವೇಶಕ್ಕೆ ಅನುಮತಿ ನೀಡಿದ್ದರಿಂದ ಜುಲೈ 10 ರಂದು 2858 ಮತ್ತು ಜುಲೈ 11 ರಂದು 4895 ಪ್ರವಾಸಿಗರು ಭೇಟಿ ನೀಡಿದ್ದರು. ಈ ಹಿನ್ನಲೆಯಲ್ಲಿ ಜನಸಂದಣಿ ದಿನೇ ದಿನೇ ಹೆಚ್ಚಾಗುತ್ತಿರುವುದನ್ನು ಮನಗಂಡ ಜಿಲ್ಲಾಡಳಿತ ಜುಲೈ 7 ರಂದು ವಾರಾಂತ್ಯದ ಪ್ರವಾಸಿಗರ ಭೇಟಿಯನ್ನು ನಿಷೇಧಿಸಿತ್ತು. ಬಡವರ ಊಟಿ ಎಂದೇ ಹೆಸರುವಾಸಿಯಾದ ನಂದಿಬೆಟ್ಟವೂ ಬೆಂಗಳೂರು ರಾಜ್ಯಧಾನಿಗೆ ತುಂಬಾ ಹತ್ತಿರವಿರುವುದರಿಂದ ಹೆಚ್ಚೆಚ್ಚು ಪ್ರವಾಸಿಗರು ನಂದಿಬೆಟ್ಟಕ್ಕೆ ಭೇಟಿ ನೀಡುವುದನ್ನು ಮನಗಂಡ ಜಿಲ್ಲಾಡಳಿತ ನಂದಿ ಬೆಟ್ಟದ ಮೇಲೆ ಮುಂದಾಗಬಹುದಾದ ಜನಸಂದಣಿ ಯನ್ನು ತಡೆಗಟ್ಟಿ ಸುರಕ್ಷಿತವಾಗಿ ಪ್ರವಾಸಿಗರು ಬಂದು ಹೋಗಲು ವೈಜ್ಞಾನಿಕವಾಗಿ ವ್ಯವಸ್ಥಿತ ಯೋಜನೆಯನ್ನು ರೂಪಿಸುವ ಉದ್ದೇಶ ಹೊಂದಿದೆ. ಈ ಹಿನ್ನಲೆಯಲ್ಲಿ ಜುಲೈ 19 ರಿಂದ ವಾಹನ ನಿಲುಗಡೆಗೆ ಅವಕಾಶವಿರುವಷ್ಟು ಮಂದಿ ಯನ್ನು ಮಾತ್ರ ಪ್ರವೇಶ ಪಾಸ್ ಅನ್ನು ನೀಡಿ ನಂದಿಬೆಟ್ಟಕ್ಕೆ ಭೇಟಿ ನೀಡಲು ಯೋಜಿಸಲಾಗಿದೆ. ಅದಕ್ಕೆ ಪ್ರವಾಸಿಗರು ಸಹಕರಿಸಬೇಕು. ಆರಂಭದಲ್ಲಿ ಈ ಪ್ರಕ್ರಿಯೆಯು ಒಂದೆರಡು ವಾರ ಭೌತಿಕವಾಗಿ ನಡೆಯಲಿದ್ದು, ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ಆನ್ ಲೈನ್ ಮೂಲಕ ನಿರ್ವಹಿಸಲಾ ಗುವುದು ಎಂದರು.

ಶೇಕಡಾ 50% ರಷ್ಟು ಪಾಸ್‌ಗಳನ್ನು ಆನ್ ಲೈನ್ ನಲ್ಲಿ ಶೇಕಡಾ 50% ಪಾಸ್‌ಗಳನ್ನು ಬೆಟ್ಟಕ್ಕೆ ಪ್ರವೇಶಿಸುವ ಮುಖ್ಯದ್ವಾರದಲ್ಲಿ ನೀಡಲಾಗುತ್ತದೆ. ಸಾರ್ವಜನಿಕರು ಕೋವಿಡ್ ನಿಯಂತ್ರಣ ಮಾರ್ಗ ಸೂಚಿ ಕ್ರಮಗಳನ್ನು ಪಾಲಿಸಿ ಪಾಸ್ ಪಡೆಯಬೇಕು. ಆರಂಭದಲ್ಲಿ ತುಸು ಗೊಂದಲವಾದರೂ ಸಹ ಮುಂದಿನ ದಿನಗಳಲ್ಲಿ ಈ ರೀತಿಯ ವ್ಯವಸ್ಥಿತ ವೀಕ್ಷಣೆಯಿಂದ ಪ್ರವಾಸಿತಾಣವನ್ನು ವೈಜ್ಞಾನಿಕವಾಗಿ ಅಂತರಾಷ್ಟ್ರೀಯ ಮಟ್ಟದಲ್ಲಿ ಅಭಿವೃದ್ಧಿಪಡಿಸಲು ಅನುಕೂಲವಾಗಲಿದೆ ಎಂದರು.

ಪ್ರಸ್ತುತ ನಂದಿಗಿರಿಧಾಮದ ಮೇಲಿರುವ ವಾಹನ ನಿಲ್ದಾಣದಲ್ಲಿ ಪ್ರಸ್ತುತ 310 ಕಾರು, 550 ದ್ವಿಚಕ್ರ ವಾಹನಗಳ ಪಾರ್ಕಿಂಗ್ ವ್ಯವಸ್ಥೆಯಿದ್ದು, ಬೆಟ್ಟದ ಕೆಳಭಾಗದಲ್ಲಿ 350 ಕಾರು ಹಾಗೂ 200 ದ್ವಿಚಕ್ರ ವಾಹನ ಪಾರ್ಕಿಂಗ್ ಮಾಡಬಹುದಾಗಿದೆ. ಈ ನಿಲುಗಡೆಯಲ್ಲಿ ಪಾರ್ಕ್ ಮಾಡಲು ವ್ಯವಸ್ಥೆ



ಇರುವ ವಾಹನಗಳಲ್ಲಿನ ಪ್ರವಾಸಿಗರಿಗೆ ಮಾತ್ರ ಪಾಸ್ ವಿತರಿಸಿ ನಂದಿಬೆಟ್ಟ ವೀಕ್ಷಿಸಲು ಅನುಮತಿ ನೀಡಲಾಗುವುದು. ಈ ಕುರಿತು ಪ್ರವಾಸೋದ್ಯಮ ಇಲಾಖೆಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ನಿರ್ದೇಶಕರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಚರ್ಚಿಸಿ ಅವರ ನಿರ್ದೇಶನದಂತೆ ಈ ನಿರ್ಧಾರಕ್ಕೆ ಬರಲಾಗಿದೆ ಎಂದರು.

ಕೆಲವೊಂದು ಹೊಸ ನಿಯಮಗಳನ್ನು ಜಾರಿಗೆ ತರುವ ಮೂಲಕ ನಂದಿ ಪ್ರವಾಸ ತಾಣವನ್ನು ಸಂರಕ್ಷಿಸುವ ಜೊತೆಗೆ ಅಭಿವೃದ್ಧಿಪಡಿಸಲು ಯೋಜಿ ಸಲಾಗಿದೆ. ಇದಲ್ಲದೆ ಬೆಂಗಳೂರು ಗ್ರಾಮಾಂತರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾಡಳಿತ ಸಹಯೋಗ ದೊಂದಿಗೆ 7 ಎಕರೆ ಜಮೀನು ವ್ಯಾಪ್ತಿಯಲ್ಲಿ ಪಾರ್ಕಿಂಗ್ ವ್ಯವಸ್ಥೆಯನ್ನು ಅಭಿವೃದ್ಧಿ ಮಾಡಿ ಅಲ್ಲಿಂದ ಬಸ್‌ಗಳ ಮೂಲಕ ಪ್ರವಾಸಿರನ್ನು ನಂದಿ ಗಿರಿಧಾಮಕ್ಕೆ ಕರೆದೊಯ್ಯಲು ನೂತನ ವ್ಯವಸ್ಥೆಯನ್ನು ಮಾಡಲಾಗುವುದು. ಇದರಿಂದ ಪರಿಸರ ಸಂರಕ್ಷಣೆ ಮಾಡುವುದರೊಂದಿಗೆ ವಾಹನ ದಟ್ಟಣೆ ಮತ್ತು ಜನಸಂದಣಿಯನ್ನು ನಿಯಂತ್ರಿಸಲು ಶಾಶ್ವತ ಪರಿಹಾರವಾಗಲಿದೆ. ಆ ನಿಟ್ಟಿನಲ್ಲಿ ಜಿಲ್ಲಾಡಳಿತ ಜುಲೈ 14 ರಿಂದಲೇ ಹಲವು ನೂತನ ಕ್ರಮಗಳನ್ನು ಕೈಗೊಂಡಿದೆ ಎಂದರು.

**ರೋಪ್ ವೇ ನಿರ್ಮಾಣಕ್ಕೆ ಅಗತ್ಯಕ್ರಮ:–**

ನಂದಿಗಿರಿಧಾಮದಲ್ಲಿ ರೋಪ್ ವೇ ನಿರ್ಮಾಣ ಸಂಬಂಧ ಸರ್ಕಾರಿ ಸಂಸ್ಥೆಯಾದ ಮೇ 11 ಐಡೆಕ್ ಸಂಸ್ಥೆ ಹಾಗೂ ಖಾಸಗಿ ಸಂಸ್ಥೆಯಾದ ಬಾಂಬೆ ರೋಪ್ ವೇ ಸಂಸ್ಥೆಯಿಂದ ಸ್ಥಳ ಪರಿಶೀಲನೆ ಮಾಡಲಾಗುತ್ತಿದೆ. ಈಗಾಗಲೇ ಮಣ್ಣಿನ ಗುಣಮಟ್ಟ ಪರೀಕ್ಷೆ, ಸ್ಥಳೀಯ ಸಾರ್ವಜನಿಕರ ಅಭಿಪ್ರಾಯ ಸಂಗ್ರಹ ಹಾಗೂ ಡ್ರೋಣ್ ಸರ್ವೆ ಕಾರ್ಯಗಳನ್ನು ಕೈಗೊಳ್ಳಲಾಗಿದೆ. ಮುಂದಿನ ದಿನಗಳಲ್ಲಿ ರೋಪ್ ವೇ ಆದಂತಹ ಸಂದರ್ಭದಲ್ಲಿಯೂ ಸಹ ಈಗ ನಿರ್ಮಿಸುತ್ತಿರುವ ಪಾರ್ಕಿಂಗ್ ವ್ಯವಸ್ಥೆಯನ್ನು ಬಳಸಿಕೊಳ್ಳಲು ಅನುಕೂಲವಾಗಲಿದೆ ಎಂದರು.

**ನಂದಿಗಿರಿ ಪ್ರವಾಸವನ್ನು ಸ್ವಲ್ಪದಿನ ಮುಂದೂಡಿ**

ಜುಲೈ 19 ರಿಂದ ಹೊಸ ನಿಯಮಗಳನ್ನು ಜಾರಿಗೆ ತರುತ್ತಿರುವ ಹಿನ್ನಲೆಯಲ್ಲಿ ಹೊಸ ವ್ಯವಸ್ಥೆ ಸಮರ್ಪಕವಾಗಿ ಜಾರಿಯಾಗುವವರೆಗೆ ಹಾಗೂ ವಾರಾಂತ್ಯದಲ್ಲಿ ಪ್ರವಾಸಿಗರು ನಂದಿಬೆಟ್ಟ ಪ್ರವೇಶವನ್ನು ಸ್ವಲ್ಪದಿನಗಳ ಮಟ್ಟಿಗೆ ಮುಂದೂಡಿ, ಬೆಳಗಿನ ಜಾವ ಕಾಯುವಂತದ್ದು, ಜನಸಂದಣಿ, ವಾಹನದಟ್ಟಣೆ ಮಾಡುವಂತದ್ದನ್ನು ಮಾಡಬೇಡಿ. ಪಾಸ್ ಸಿಕ್ಕಿದವರು ಮಾತ್ರವೇ ನಂದಿಬೆಟ್ಟ ಪ್ರವೇಶ ಮಾಡಿ ಇನ್ಮೇಲೆ ವಾಹನಗಳಿಗೂ ಮತ್ತು ಪ್ರವಾಸಿ ಗರಿಗೂ ಪ್ರತ್ಯೇಕವಾಗಿ ಪಾಸ್ ನೀಡಲಾಗುವುದು. ಭೇಟಿ ನೀಡಿದ ಪ್ರವಾಸಿಗರು ಪಾಸ್ ಗಳನ್ನು ಹಿಂತಿರುಗಿಸಬೇಕು. ಈ ಪ್ರಕ್ರಿಯೇ ಚಕ್ರದ ರೀತಿಯಲ್ಲಿ ನಿರಂತರವಾಗಿ ನಡೆಯಲಿದೆ. ಈ ವ್ಯವಸ್ಥೆಯು ಸ್ವಲ್ಪ ದಿನದ ಮಟ್ಟಿಗೆ ಭೌತಿಕವಾಗಿ ನಡೆಯಲಿದೆ. ಮುಂದಿನ ದಿನಗಳಲ್ಲಿ ಹಂತ–ಹಂತವಾಗಿ ಅಭಿವೃದ್ಧಿಪಡಿಸಿ ಆನ್ ಲೈನ್ ನಲ್ಲಿ ಶೇಕಡಾ 50% ಮತ್ತು ಭೌತಿಕವಾಗಿ ಶೇ.50 ರಷ್ಟು ಪಾಸ್ ಗಳನ್ನು ನೀಡುವ ವ್ಯವಸ್ಥೆ ಮಾಡಲಾಗುವುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ತೋಟಗಾರಿಕೆ ಇಲಾಖೆಯ ವಿಶೇಷ ಅಧಿಕಾರಿ ಗೋಪಾಲ್, ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕ ಜಿತೇಂದ್ರನಾಥ್ ಹಾಗೂ ವಿವಿಧ ಇಲಾಖೆಗಳ ಅಧಿಕಾರಿ ಸಿಬ್ಬಂದಿಗಳು ಇದ್ದರು.

## ‘ಡ್ರೈವ್ ಥ್ರೂ ವ್ಯಾಕ್ಸಿನೇಷನ್’ ಜಾಗೃತಿ ಕಾರ್ಯಕ್ರಮ



**ಬೆಂಗಳೂರು:** ಕೋವಿಡ್–19 ಈ ಸಾಂಕ್ರಾಮಿಕವು ನಿಜವಾಗಿಯೂ ಎಲ್ಲರಿಗೂ ಕಠಿಣವಾದ ವಾಸ್ತವವಾಗಿದೆ. ಅಗತ್ಯತೆಯ ಈ ಸಮಯದಲ್ಲಿ ಎನ್‌ಜಿಓಗಳು, ನಾಗರಿಕರು ಮತ್ತು ಉದ್ಯಮಗಳು ಜನರಿಗೆ ಸಹಾಯ ಮಾಡಲು ಮುಂದೆ ಬಂದವು. ಅನೇಕ ಸಮುದಾಯ ಅಡಿಗೆ ಮನೆಗಳು ಪ್ರಾರಂಭವಾಗಿ ಅಗತ್ಯವಿರುವವರಿಗೆ ಆಹಾರ ಪ್ಯಾಕೆಟ್‌ಗಳನ್ನು ಸುರಕ್ಷಿತವಾಗಿ ಪೂರೈಸಿದವು. "ಜನರಿಗಾಗಿ ಡ್ರೈವ್–ಥ್ರೂ" ವ್ಯಾಕ್ಸಿನೇಷನ್ ಕಾರ್ಯಕ್ರಮವನ್ನು ಯಶಸ್ವಿಯಾಗಿ ಪ್ರಾರಂಭಿಸಲಾಯಿತು. ಇಲ್ಲಿ ಜನರು ತಮ್ಮ ಕಾರುಗಳಲ್ಲಿರುವಾಗ ಲಸಿಕೆ ಪಡೆಯಬಹುದು, ಆದರೆ ಸ್ಲಾಟ್ ಅನ್ನು ಮುಂಚಿತವಾಗಿ ಕಾಯ್ದಿರಿಸಬೇಕಾಗುತ್ತದೆ.

ಮಾರಾಟಗಾರರು, ಭದ್ರತಾ ಸಿಬ್ಬಂದಿ, ಸೇವಾ ಪೂರೈಕೆದಾರರು ಕೋವಿಡ್ ಪ್ರೋಟೋಕಾಲ್‌ಗಳನ್ನು ಪಾಲಿಸುವುದಿಲ್ಲ ಆದ್ದರಿಂದ ಮನೆಯಲ್ಲಿಯೇ ಇರಿ ಎಂದು ಬಹಳಷ್ಟು ಹೇಳಲಾಗುತ್ತಿದೆ. ಆದರೆ ಈ ಸಮಯದಲ್ಲಿ ರಾಷ್ಟ್ರವು ಸಾವುನೋವುಗಳಿಂದ ತತ್ತರಿಸುತ್ತಿರುವಾಗಇವರಿಗೆ ತಮ್ಮ ದಿನದ ಊಟವನ್ನು ಸಂಪಾದಿಸಲು ಬೇರೆ ದಾರಿಯಿಲ್ಲ. ಅವರಿಗೆ ಯಾವುದೇ ರೀತಿಯಲ್ಲಿ ಸಹಾಯ ಮಾಡಲು ನಾವು ಸಿದ್ಧರಾಗಿದ್ದೇವೆ ಎಂದು Homes24x7 ಸ್ಥಾಪಕ ಪ್ರಿಯಥಮ್ ಕುಮಾರ್ ಹೇಳಿದರು.

Homes24x7 ತನ್ನ ಪ್ರಯತ್ನ ಮತ್ತು ಗಮನಗಳನ್ನು ಅತ್ಯಂತ ಹಿಂದುಳಿದವರ ಮೇಲೆ ಕೇಂದ್ರೀಕರಿಸಿದೆ. ಪೊಲೀಸ್ ಪಡೆ, ಭದ್ರತಾ ಸಿಬ್ಬಂದಿ, ರಸ್ತೆ ಮಾರಾಟಗಾರರು ಇತ್ಯಾದಿಗಳಿಗೆ 1 ಲಕ್ಷ ಮಾಸ್ಕ್ ವಿತರಿಸಿದೆ. ಮಾಸ್ಕ್ ಗಳ ಜೊತೆಗೆ, ಕಂಪನಿಯು 10,000 ಟಿ–ಶರ್ಟ್‌ಗಳನ್ನು ವಿತರಿಸಲು ಮುಂದಾಯಿತು, ‘ವೇರ್ ಮಾಸ್ಕ್, ಸೇವ್ ಲೈಫ್’ ಎಂಬ ಟೈಟಲ್ ಹೊಂದಿರುವ ಈ ಶರ್ಟ್‌ಗಳ ಮೂಲಕ ಜನರಲ್ಲಿ ಮಾಸ್ಕ್ ಧರಿಸುವ ಬಗ್ಗೆ ಜಾಗೃತಿ ಮೂಡಿಸಲು ಕಂಪನಿ ಪ್ರಯತ್ನಿಸುತ್ತಿದೆ.

## ಜು.17ರಂದು ಬಳ್ಳಾರಿ ಜಿಲ್ಲಾ ಸಲಹಾ ಸಮಿತಿ ಸಭೆ

**ಬಳ್ಳಾರಿ:** ಪಿ.ಸಿ. ಮತ್ತು ಪಿ.ಎನ್.ಡಿ.ಟಿ ಗರ್ಭ ಪೂರ್ವ ಮತ್ತು ಪ್ರಸವ ಪೂರ್ವ ಭ್ರೂಣಲಿಂಗ ಪತ್ತೆ ತಂತ್ರ ವಿಧಾನಗಳ ಲಿಂಗ ಆಯ್ಕೆ ನಿಷೇಧ ಕಾಯ್ದೆ ಅನುಷ್ಠಾನಕ್ಕಾಗಿ ಜಿಲ್ಲಾ ಸಲಹಾ ಸಮಿತಿ ಸಭೆಯನ್ನು ಜು.17ರಂದು ಸಂಜೆ 4ಕ್ಕೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯದ ಕಛೇರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಭೆಗೆ ಸಲಹಾ ಸಮಿತಿ ಸದಸ್ಯರು ಹಾಗೂ ಸಂಬಂಧಿಸಿದ ಎಲ್ಲಾ ಅಧಿಕಾರಿಗಳು ನಿಗದಿಪಡಿಸಿದ ಸಮಯಕ್ಕೆ ಹಾಜರಾಗಬೇಕು ಎಂದು ಅವರು ತಿಳಿಸಿದ್ದಾರೆ.

### ಅನುಗೊಂಡಹಳ್ಳಿ ಹೋಬಳಿಗೆ ಸಂಸದರ ಅನುದಾನದಲ್ಲಿ

# ಮಾದರಿ ಆಸ್ಪತ್ರೆ ನಿರ್ಮಾಣ: ಸಂಸದ ಬಿ.ಎನ್.ಬಚ್ಚೇಗೌಡ

**ಹೊಸಕೋಟೆ:** ಸಂಸದರ ಅನುದಾನದಲ್ಲಿ ಹೊಸಕೋಟೆ ತಾಲೂಕಿಗೊಂದು ಮಾದರಿ ಆಸ್ಪತ್ರೆ ನಿರ್ಮಿಸುವ ಅವಕಾಶ ಇದ್ದು, ಅನುಗೊಂಡಹಳ್ಳಿಯಲ್ಲಿ ಮಾದರಿಯಾದ ಆಸ್ಪತ್ರೆ ನಿರ್ಮಾಣ ಮಾಡುವುದಾಗಿ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಸಂಸದ ಬಿ.ಎನ್.ಬಚ್ಚೇಗೌಡ ಭರವಸೆ ನೀಡಿದರು.

ತಾಲೂಕಿನ ತಿರುವರಂಗ ಗ್ರಾಮದಲ್ಲಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ನೂತನ ಕಟ್ಟಡ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದರು.

ತಾಲೂಕಿನಲ್ಲಿ ಶೇ 60 ರಷ್ಟು ಜನಕ್ಕೆ ಲಸಿಕೆ ವಿತರಣೆ ಆಗಿದೆ. ಸರ್ಕಾರದಿಂದ ಉಚಿತ ಲಸಿಕೆ ವಿತರಣೆ ಮಾಡುತ್ತಿದ್ದು ಆತಂಕ ಬಿಟ್ಟು ಲಸಿಕೆ ಪಡೆಯುವ ಕೆಲಸ ಆಗಬೇಕು. ಸಂಸದರ ಅನುದಾನದಲ್ಲಿ ತಾಲೂಕಿಗೊಂದು ಮಾದರಿ ಆಸ್ಪತ್ರೆ ನಿರ್ಮಿಸುವ ಅವಕಾಶ ಇದ್ದು, ಅನುಗೊಂಡಹಳ್ಳಿಯಲ್ಲಿ ನಿರ್ಮಾಣ ಮಾಡುವುದಾಗಿ ಭರವಸೆ ನೀಡಿದರು. ಸುಮಾರು 20 ಲಕ್ಷ ವೆಚ್ಚದಲ್ಲಿ ನೂತನ ಹಾಲಿನ ಡೈರಿ ನಿರ್ಮಿಸುವ



ಮೂಲಕ ಹಾಲು ಉತ್ಪಾದನೆಗೆ ಪ್ರೋತ್ಸಾಹ ನೀಡಲಾಗುತ್ತಿದೆ ಎಂದರು.

ಶಾಸಕ ಶರತ್ ಬಚ್ಚೇಗೌಡ ಮಾತನಾಡಿ ಗ್ರಾಮದಲ್ಲಿ ಸುಮಾರು 20 ವರ್ಷಗಳ ಹಿಂದೆ ಸ್ಥಾಪನೆ ಮಾಡಲಾದ ಹಾಲಿನ ಡೈರಿ ಯಶಸ್ವಿಯಾಗಿ ಕರ್ತವ್ಯ ನಿರ್ವಹಣೆ ಮಾಡುತ್ತಿದೆ. ಕೊರೊನಾ ಸಂದರ್ಭದಲ್ಲಿ ಸಹಕಾರ ಸಂಘಗಳ ಹಾಗೂ ಬಮೂಲ್ ವತಿಯಿಂದ ಸೋಂಕು ನಿವಾರಣೆಗೆ ಗ್ರಾಮಗಳಿಗೆ ರಾಸಾಯನಿಕ ಸಿಂಪಡನೆ ಸೇರಿದಂತೆ ಕೊರೊನಾ ವಾರಿಯರ್ಸ್ ಗಳಿಗೆ ಅಗತ್ಯ ನೆರವನ್ನು ನೀಡುವ ಮೂಲಕ ಉತ್ತಮ ಕೆಲಸ ಮಾಡಿದೆ ಎಂದರು

ಹಾಲು ಡೈರಿ ಸಂಘದ ಅಧ್ಯಕ್ಷೆ ಶ್ವೇತಾ ರೆಡ್ಡಿ, ಉಪಾಧ್ಯಕ್ಷೆ ನಂದಿನಿ ಬಾಬು, ಕಾರ್ಯದರ್ಶಿ ಭಾಗ್ಯಮ್ಮ ನಾರಾಯಣಸ್ವಾಮಿ, ಬಮೂಲ್ ನಿರ್ದೇಶಕ ಕೆಎಂಎಂ ಮಂಜುನಾಥ, ರಾಜ್ಯ ರೆಡ್ಡಿ ಸಂಘದ ನಿರ್ದೇಶಕ ಮುತ್ಸಂದ್ರ ಎಂ.ಎ. ಕೃಷ್ಣಾರೆಡ್ಡಿ (ಕಿಟ್ಟಿ) ಹೋಬಳಿ ಮುಖಂಡ ಭೋದನಹೊಸಹಳ್ಳಿ ಪ್ರಕಾಶ್, ಜಿಪಂ ಮಾಜಿ ಅಧ್ಯಕ್ಷ ತಿರುವರಂಗ ನಾರಾಯಣಸ್ವಾಮಿ, ಬಿಡಿಸಿಸಿ ಬ್ಯಾಕ್ ನಿರ್ದೇಶಕ ಬಾಬುರೆಡ್ಡಿ ಗ್ರಾಪಂ ಅಧ್ಯಕ್ಷೆ ಧನಲಕ್ಷ್ಮಿ ಶೇಖರ್, ಬಾಗೂರು ಪಟೇಲ್ ಶೇಖರ್, ಸೇರಿದಂತೆ ಇತರೆ ಮುಖಂಡರಿದ್ದರು.

> ■ **ತಾಲೂಕಿನಲ್ಲಿ ಶೇ 60 ರಷ್ಟು ಜನಕ್ಕೆ ಲಸಿಕೆ ವಿತರಣೆ ಆಗಿದೆ. ಸರ್ಕಾರದಿಂದ ಉಚಿತ ಲಸಿಕೆ ವಿತರಣೆ ಮಾಡುತ್ತಿದ್ದು ಆತಂಕ ಬಿಟ್ಟು ಲಸಿಕೆ ಪಡೆಯುವ ಕೆಲಸ ಆಗಬೇಕು. ಸಂಸದರ ಅನುದಾನದಲ್ಲಿ ತಾಲೂಕಿಗೊಂದು ಮಾದರಿ ಆಸ್ಪತ್ರೆ ನಿರ್ಮಿಸುವ ಅವಕಾಶ ಇದ್ದು, ಅನುಗೊಂಡಹಳ್ಳಿಯಲ್ಲಿ ನಿರ್ಮಾಣ ಮಾಡಲಾಗುವುದು.**
> **– ಬಿ.ಎನ್. ಬಚ್ಚೇಗೌಡ, ಸಂಸದರು**

## ಸಹಾಯಧನಕ್ಕಾಗಿ ಅರ್ಜಿ ಆಹ್ವಾನ

**ಬೆಂಗಳೂರು:** ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ 2019–20ನೇ ಸಾಲಿನಲ್ಲಿ ವಿಶೇಷ ಕೇಂದ್ರಿಯ ನೆರವಿನಡಿ ಪರಿಶಿಷ್ಟ ಪಂಗಡದವರಿಗೆ ಕೋಳಿ ಸಾಕಾಣಿಕೆ ಕೇಂದ್ರಗಳನ್ನು ಸ್ಥಾಪಿಸಲು ಸಹಾಯಧನ ನೀಡುವ ಕಾರ್ಯಕ್ರಮಕ್ಕೆ ಅರ್ಹ ಆಸಕ್ತ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಫಲಾನುಭವಿಗಳು ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ದೇವನಹಳ್ಳಿ, ದೊಡ್ಡಬಳ್ಳಾಪುರ, ಹೊಸಕೋಟೆ ಮತ್ತು ನೆಲಮಂಗಲ ತಾಲ್ಲೂಕು ಕಚೇರಿಗಳಲ್ಲಿ ಅರ್ಜಿಗಳನ್ನು ಪಡೆದು, ಅಗತ್ಯ ದಾಖಲಾತಿಗಳೊಂದಿಗೆ 2021ರ ಜುಲೈ 23 ರೊಳಗಾಗಿ ಸಂಬಂಧಪಟ್ಟ ತಾಲ್ಲೂಕಿನ ಸಹಾಯಕ ನಿರ್ದೇಶಕರ ಕಚೇರಿಗಳಿಗೆ ಸಲ್ಲಿಸುವುದು.

ಅರ್ಜಿದಾರರು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರಬೇಕು. ಅರ್ಜಿದಾರರು ಕರ್ನಾಟಕದವರಾಗಿದ್ದು, ಬೆಂಗಳೂರು ಗ್ರಾಮಾಂತರ ಜಿಲ್ಲೆ ನಿವಾಸಿಯಾಗಿರಬೇಕು. ಅರ್ಜಿದಾರರ ವಯಸ್ಸು 18 ರಿಂದ 60 ವರ್ಷಗಳ ಒಳಗಿರಬೇಕು. ಫಲಾನುಭವಿಗಳ ವಾರ್ಷಿಕ ಆದಾಯ ರೂ.1.50 ಲಕ್ಷಗಳ ಒಳಗಡೆ ಇರತಕ್ಕದ್ದು. ಅರ್ಜಿದಾರರು ಹಾಗೂ ಅವರ ಅವಲಂಬಿತ ಕುಟುಂಬದ ಸದಸ್ಯರು ಸರ್ಕಾರಿ ನೌಕರಿಯಲ್ಲಿರಬಾರದು. ಅರ್ಜಿದಾರರಾಗಲಿ, ಕುಟುಂಬದ ಸದಸ್ಯರಾಗಲೀ ನಿಗಮದ ಯಾವುದೇ ಯೋಜನೆಯಡಿ ಈ ಹಿಂದೆ ಯಾವುದೇ ಸೌಲಭ್ಯವನ್ನು ಪಡೆದಿರಬಾರದು. ಅರ್ಜಿದಾರರು ಬಿಪಿಎಲ್ ಕಾರ್ಡ್ ಮತ್ತು ಆಧಾರ್ ಕಾರ್ಡ್ ಹೊಂದಿರಬೇಕು. ಸದರಿ ಘಟಕದ ವೆಚ್ಚ ರೂ.5,50,000/– ಆಗಿದ್ದು, ಇಲಾಖೆಯ ವತಿಯಿಂದ ಶೇ.75% ರಷ್ಟು ಅಂದರೆ, ರೂ.4,12,500/– ಗಳ ಸಹಾಯದನ ನೀಡಲಾಗುವುದು, ಶೇ.25% ರಷ್ಟು ಅಂದರೆ ರೂ.1,37,500/– ಗಳನ್ನು ಫಲಾನುಭವಿ ಭರಿಸಬೇಕು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಪಶು ಸಂಗೋಪನೆ ಇಲಾಖೆಯಿಂದ ಅನುಮತಿ ಪತ್ರ ಸಲ್ಲಿಸುವುದು.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ ದೂರವಾಣಿ ಸಂಖ್ಯೆ: 080–29787448, ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ದೇವನಹಳ್ಳಿ – ದೂರವಾಣಿ ಸಂಖ್ಯೆ: 080–27681784, ದೊಡ್ಡಬಳ್ಳಾಪುರ – ದೂರವಾಣಿ ಸಂಖ್ಯೆ: 080–27623681, ಹೊಸಕೋಟೆ – ದೂರವಾಣಿ ಸಂಖ್ಯೆ: 080–27931528, ನೆಲಮಂಗಲ – ದೂರವಾಣಿ ಸಂಖ್ಯೆ: 080–27723172 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗ್ರಾಮದ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿ

### ಉದ್ಯೋಗ ಖಾತ್ರಿ ಯೋಜನೆಯಿಂದ ನಿರುದ್ಯೋಗಿಗಳಿಗೆ ಉದ್ಯೋಗ: ವೆಂಕಟೇಶ್



**ಬೆಂಗಳೂರು:** ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆ ಬಳಕೆ ಮಾಡಿಕೊಂಡು ಗ್ರಾಮದ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಬೇಕೆಂದು ಇಓ ವೆಂಕಟೇಶ್ ಹೇಳಿದರು.

ದೊಡ್ಡಜಾಲ ಗ್ರಾಮಪಂಚಾಯಿತಿ ಸದಸ್ಯ, ಮಾಜಿ ಅಧ್ಯಕ್ಷ ಎನ್.ಕೆ.ಮಹೇಶ್ ಕುಮಾರ್ ಜನುಮ ದಿನದ ಅಂಗವಾಗಿ ನವರತ್ನ ಅಗ್ರಹಾರ ಕೆರೆ ಅಂಗಳದಲ್ಲಿ ಹಮ್ಮಿಕೊಂಡಿದ್ದ ಗಿಡ ನೆಡುವ ಕಾರ್ಯಕ್ರಮದಲ್ಲಿ ಮುಖ್ಯ ಅಥಿತಿಯಾಗಿ ಪಾಲ್ಗೊಂಡು ನಂತರ ಮಾತನಾಡಿದ ಅವರು, ಇಂದು ಸಿಎಸ್‌ಎಫ್ ಹಾಗೂ ಗ್ರಾಮಸ್ಥರ ಸಹಕಾರದಲ್ಲಿ ಗಿಡ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು ಆಗ ಮಾತ್ರ ಗ್ರಾಮಗಳ ಅಭಿವೃದ್ಧಿ ಜೊತೆಗೆ ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸಿದಂತಾಗುತ್ತದೆ ಎಂದರು.

ದೊಡ್ಡಜಾಲಾ ಗ್ರಾಮಪಂಚಾಯಿತಿ ಸತತವಾಗಿ ಮೂರು ಬಾರಿ ಗಾಂಧಿಗ್ರಾಮ ಪಶಸ್ತಿ ತನ್ನದಾಗಿಸಿಕೊಂಡಿದೆ. ಸಾಕಷ್ಟು ಅಭಿವೃದ್ಧಿ ಕಾರ್ಯಗಳಿಂದ ಮಾದರಿಯಾಗಿದೆ. ಇದೇ ಮಾದರಿಯಲ್ಲಿ ಇತರ ಪಂಚಾಯತಿಗಳ ಅಭಿವೃದ್ಧಿ ಆಗಬೇಕಿದೆ ಎಂದು ಹೇಳಿದರು.

ಮಾಜಿ ಅಧ್ಯಕ್ಷ ಎನ್.ಕೆ.ಮಹೇಶ್ ಕುಮಾರ್ ಮಾತನಾಡಿ, ಇತ್ತೀಚೆಗೆ ಆಧುನಿಕ ಯುಗದಲ್ಲಿ ಕೈಗಾರಿಕೋದ್ಯಮಗಳು ಹೆಚ್ಚಾಗಿ ವಾಯುಮಾಲಿನ್ಯವಾಗುತ್ತಿದೆ. ಹೀಗಾಗಿ, ಪ್ರಕೃತಿ ವಿಕೋಪದಿಂದಾಗಿ ಹೊಸ ಹೊಸ ಖಾಯಿಲೆಗಳು ಬಂದು ಜನರ ಬಲಿತೆಗೆದುಕೊಳ್ಳುತ್ತಿವೆ. ಕೃತಕ ಆಮ್ಲಜನಕಕ್ಕೆ ಮೊರೆ ಹೋಗುವ ಸ್ಥಿತಿ ನಿರ್ಮಾಣವಾಗಿದೆ. ಮರಗಿಡಗಳು ನಮ್ಮ ಉಸಿರು ಪ್ರತಿಯೊಬ್ಬರ ಗಿಡಗಳನ್ನು ನೆಡುವ ಮೂಲಕ ಪ್ರಕೃತಿ ಕಾಪಾಡಬೇಕಿದೆ ಎಂದು ಕರೆ ನೀಡಿದರು. ಇದೇ ವೇಳೆ ಜನುಮ ದಿನದ ಅಂಗವಾಗಿ ಕೇಕ್ ಕತ್ತರಿಸಿ ಹೂಗುಚ್ಛ ನೀಡುವ ಮೂಲಕ ಅಭಿಮಾನಿಗಳು ಶುಭಕೋರಿದರು. ಗಿಡನೆಡುವ ಮೂಲಕ ಸರಳವಾಗಿ ಆಚರಣೆ ಮಾಡಿದ್ದು ವಿಶೇಷವಾಗಿತ್ತು.

ಕಾರ್ಯಕ್ರಮದಲ್ಲಿ ದೊಡ್ಡಜಾಲಾ ಗ್ರಾಮ ಪಂಚಾಯತಿ ಅಧ್ಯಕ್ಷೆ ಹಂಸವೇಣಿ, ಸದಸ್ಯರಾದ ಪ್ರಕಾಶ್, ಚೇತನ್, ಆರ್.ಬೈರೇಗೌಡ, ಪಿಡಿಓ ಗಂಗಾರಾಮ್, ಅವಿನಾಶ್, ಪ್ರದೀಪ್ ಮುತ್ತು, ಶಿವರಾಜು, ಮಹೇಶ್, ವಿನಯ್, ಪ್ರದೀಪ್, ರಾಜೇಶ್ ಸೇರಿದಂತೆ ಇನ್ನಿತರರಿದ್ದರು.

### ದೊಡ್ಡಬಳ್ಳಾಪುರ ಠಾಣೆಯ ಯಶಸ್ವಿ ಕಾರ್ಯಾಚರಣೆ

# ಕುಖ್ಯಾತ ಕಳ್ಳರ ಬಂಧನ: ಬೈಕ್‌ಗಳ ವಶ



**ದೊಡ್ಡಬಳ್ಳಾಪುರ:** ನಕಲಿ ಕೀ ಮತ್ತು ಹ್ಯಾಂಡಲ್ ಮುರಿದು ದೊಡ್ಡಬಳ್ಳಾಪುರದ ಸುತ್ತಮುತ್ತ ಬೈಕ್ ಕಳ್ಳತನ ಮಾಡುತ್ತಿದ್ದ ಕುಖ್ಯಾತ ಕಳ್ಳರನ್ನು ಬಂಧಿಸುವಲ್ಲಿ ದೊಡ್ಡಬಳ್ಳಾಪುರ ಪೊಲೀಸರು ಯಶಸ್ವಿ ಯಾಗಿದ್ದಾರೆ.

ಹಿಂದೂಪುರದ ಪ್ರವೀಣ್ ಹಾಗೂ ಸೈಯದ್ ನಿಜಮ್ ಮತ್ತು ದೊಡ್ಡಬಳ್ಳಾಪುರದ ಮಹಮ್ಮದ್ ಪಾಷ ಬಂಧಿತ ಆರೋಪಿಗಳು.

ನಗರ ಠಾಣಾ ವ್ಯಾಪ್ತಿಯಲ್ಲಿ ಬೈಕ್ ಕಳವು ಪ್ರಕರಣಕ್ಕೆ ತನಿಖೆಯನ್ನು ಡಿವೈಎಸ್ಪಿ ರಂಗಪ್ಪ, ಸಿಪಿಐ ನವೀನ್ ಕುಮಾರ್ ಎಂ.ಬಿ ಮತ್ತು ಪಿಎಸ್‌ಐ ಗೋವಿಂದ್ ನೇತೃತ್ವ ದಲ್ಲಿ ನಡೆದಿದ್ದು, ಮೂವರು ಬೈಕ್ ಕಳ್ಳರ ಜೊತೆ 16 ಬೈಕ್‌ಗಳನ್ನು ಜಪ್ತಿ ಮಾಡಲಾಗಿದೆ.

ಮೂವರು ಆರೋಪಿಗಳು ಅಪರಾಧ ಚಟುವಟಿಕೆಗಳಲ್ಲಿ ತೊಡಗಿದ್ದು, ಅಪರಾಧ ಹಿನ್ನಲೆ ಜೈಲಿಗೆ ಹೋದಾಗ ಮೂವರು ನಡುವೆ ಸ್ನೇಹವಾಗಿ ಹೊರ ಬಂದ ನಂತರ ಬೈಕ್ ಕಳ್ಳತನದಲ್ಲಿ ತೊಡಗಿದ್ದರು. ಬೆಂಗಳೂರು ನಗರದ ಯಶವಂತಪುರ ವಿವಿಧ ಪ್ರದೇಶಗಳು, ದೊಡ್ಡಬಳ್ಳಾಪುರದ ವಿವಿಧ ರಸ್ತೆಗಳು, ಮನೆಮುಂದೆ ನಿಲ್ಲಿಸಿದ್ದ ಬೈಕ್‌ಗಳನ್ನು ಕಳವು ಮಾಡುತ್ತಿದ್ದರು, ನಕಲಿ ಕೀ ಮತ್ತು ಹ್ಯಾಂಡಲ್ ಮುರಿದು ಬೈಕ್‌ಗಳನ್ನ ಕದ್ದು ಬೈಕ್‌ಗಳನ್ನ ಹಿಂದೂಪುರ ಸೇರಿದಂತೆ ಹಲವಾರು ಕಡೆ ಮಾರಾಟ ಮಾಡಿ ಶೋಕಿ ಜೀವನ ನಡೆಸುತ್ತಿದ್ದರು ಎನ್ನಲಾಗಿದೆ.

## ಜೈನ್‌ನಿಂದ ಹೊಸ ಆನ್‌ಲೈನ್ ಎಂಬಿಎ, ಬಿಬಿಎ ಪದವಿ ಪ್ರಾರಂಭ

**ಬೆಂಗಳೂರು:** ಆನ್‌ಲೈನ್ ಶಿಕ್ಷಣವನ್ನು ಮುಖ್ಯವಾಹಿನಿಯ ವಿದ್ಯಮಾನವನ್ನಾಗಿ ಮಾಡುವುದು, ಏಷ್ಯಾದ ಉನ್ನತ ಎಡ್‌ಟೆಕ್ ಮೇಜರ್ ಅಪ್‌ಗ್ರಾಡ್, ಎರಡು ಹೊಸ ಆನ್‌ಲೈನ್ ಪದವಿ ಕಾರ್ಯಕ್ರಮಗಳನ್ನು ಪರಿಚಯಿಸಲು ಹೆಸರಾಂತ ಜೈನ್ (ಡೀಮ್ಡ್–ಟು–ಬಿ ಯುನಿವರ್ಸಿಟಿ)ಯೊಂದಿಗಿನ ತನ್ನ ಸಹ ಭಾಗಿತ್ವವನ್ನು ಪ್ರಕಟಿಸಿದೆ, ಅವುಗಳೆಂದರೆ ಎಂಬಿಎ (ಮಾಸ್ಟರ್ ಆಫ್ ಬ್ಯುಸಿನೆಸ್ ಆಡಳಿತ) ಮತ್ತು ಬಿಬಿಎ (ಬ್ಯಾಚುಲರ್ ಆಫ್ ಬ್ಯುಸಿನೆಸ್ ಅಡ್ಮಿನಿಸ್ಟ್ರೇಷನ್), ಹೆಚ್ಚುವರಿ ವಿಶೇಷತೆಗಳೊಂದಿಗೆ. ಇವುಗಳ ಪ್ರಾರಂಭವು ಅಪ್‌ಗ್ರಾಡ್‌ನ ಆಳವಾದ ಭಾರತ ಭೇದಿಸಿಕೊಂಡು ಹೋಗುವ ಯೋಜನೆಗಳನ್ನು ಇನ್ನಷ್ಟು ಬಲಪಡಿಸುತ್ತದೆ.

ಪದವಿಗಳನ್ನು ಪರಿಗಣಿಸಿದರೆ ಇಂದು ಒಂದು ಡಜನ್ ಪದವಿಗಳು ಲಭ್ಯವಿವೆ. ಈ ಪಾಲುದಾರಿಕೆಯ ಗುಣಮಟ್ಟದ ಫಲಿತಾಂಶ–ಆಧಾರಿತ ಕಲಿಕೆಯ ಪರಿಹಾರಗಳನ್ನು ತಲುಪಿಸುವ ಅಪ್‌ಗ್ರಾಡ್‌ನ ಬದ್ಧತೆಗೆ ಸಾಕ್ಷಿಯಾಗಿದೆ, ಅದು ಕಲಿಯುವವರಿಗೆ ಯುಜಿಸಿ ಮಾನ್ಯತೆ ಪಡೆದ ಪದವಿಯನ್ನು ನೀಡುತ್ತದೆ, ಮತ್ತು ಯುವ ಭಾರತ್ ತಮಗೆ ಅರ್ಥಪೂರ್ಣವಾದ ವೃತ್ತಿ ಜೀವನದ ಫಲಿತಾಂಶಗಳನ್ನು ಪಡೆಯಲು ಸಹಾಯ ಮಾಡುತ್ತದೆ.

ಆನ್‌ಲೈನ್‌ನಲ್ಲಿ 360 ಡಿಗ್ರಿ ವಿಶ್ವವಿದ್ಯಾಲಯದ ಅನುಭವ, ಅನುಕೂಲಕ್ಕೆ ತಕ್ಕಂತೆ ಕಲಿಕೆಯ ನಮ್ಯತೆ, ಕಾರ್ಯಕ್ರಮದ ಉದ್ದಕ್ಕೂ ಕೈಹಿಡಿಯುವ ವಿದ್ಯಾರ್ಥಿ ಬೆಂಬಲ ತಂಡ, ಪಿಯರ್–ಟು–ಪಿಯರ್ ಕಲಿಕೆ, ಒಳಗೊಂಡಿರುವ ಅಪ್‌ಗ್ರಾಡ್ ಮತ್ತು ಜೈನ್ (ಡೀಮ್ಡ್–ಟು–ಬಿ ಯುನಿವರ್ಸಿಟಿ) ಪ್ರಯೋಜನದಿಂದ ಕಲಿಯುವವರು ಪ್ರಯೋಜನ ಪಡೆಯುತ್ತಾರೆ. ಅವರ ಮನೆಗಳ ಸೌಕರ್ಯದಿಂದ ಪೂರ್ವಭಾವಿ ಮೌಲ್ಯಮಾಪನಗಳು ಮತ್ತು ಪರೀಕ್ಷೆಗಳೊಂದಿಗೆ, ಕೋರ್ಸ್ ಪೂರ್ಣಗೊಂಡನಂತರ, ಅಪ್‌ಗ್ರಾಡ್ 6 ತಿಂಗಳವರೆಗೆ ಪಾವತಿಸಿದ ಇಂಟರ್ನ್‌ಶಿಪ್ ಮತ್ತು ಕಾರ್ಯಕ್ಷಮತೆಯ ಆಧಾರದ ಮೇಲೆ 3 ವರ್ಷಗಳ ವರೆಗೆ ಪ್ಲೇಸ್‌ಮೆಂಟ್ ಬೆಂಬಲವನ್ನು ಒಳಗೊಂಡಿರುವ ವೃತ್ತಿ ಸೇವೆಗಳೊಂದಿಗೆ ಕಲಿಯುವವರಿಗೆ ಸಹಾಯ ಮಾಡುತ್ತದೆ.

ಪಾಲುದಾರಿಕೆಯ ಬಗ್ಗೆ ಮಾತನಾಡುತ್ತಾ, ಅಪ್‌ಗ್ರಾಡ್‌ನ ಸಹ–ಸಂಸ್ಥಾಪಕ ಫಲ್ಗುನ್ ಕೊಂಪಲ್ಲಿ, “ಇಂದಿನ ವಿಯುಸಿಎ ಜಗತ್ತಿನಲ್ಲಿ, ಸರಿಯಾದ ವಿಶೇಷತೆಯೊಂದಿಗೆ ಅರ್ಥಪೂರ್ಣ ಪದವಿ ಪಡೆಯುವುದು ಅನಿವಾರ್ಯವಾಗಿದೆ. ಈ ಸಹಭಾಗಿತ್ವವು ನಮ್ಮ ಕಲಿಯುವವರಿಗೆ ಬೋಧಕವರ್ಗ ಮತ್ತು ಸೌಲಭ್ಯಗಳ ವಿಷಯದಲ್ಲಿ ಹೆಚ್ಚಿನ ಸಾಮರ್ಥ್ಯಗಳನ್ನು ಹೊಂದಲು ಅನುವು ಮಾಡಿಕೊಡುತ್ತದೆ, ಅದು ಆಧುನಿಕಕಾಲದ ವಿಭಾಗಗಳಲ್ಲಿ ಆಳವಾದ ವಿಷಯ ಜ್ಞಾನವನ್ನು ಸಶಕ್ತಗೊಳಿಸುದಲ್ಲದೇ, ಅವರು ಬಯಸಿಸ ವೃತ್ತಿ ಫಲಿತಾಂಶಗಳನ್ನು ಸಾಧಿಸಲು ಸಹಾಯ ಮಾಡುತ್ತದೆ. ಜೈನ್ (ಡೀಮ್ಡ್–ಟು–ಬಿ ಯುನಿವರ್ಸಿಟಿ)ಯನ್ನು ಪಾಲುದಾರಿಕೆಗೆ ಸ್ವಾಗತಿಸಲು ನಮಗೆ ಸಂತೋಷವಾಗಿದೆ” ಎಂದು ಹೇಳಿದರು.

ಜೈನ್ (ಡೀಮ್ಡ್–ಟು–ಬಿ ಯುನಿವರ್ಸಿಟಿ) ಉಪಕುಲಪತಿ ಡಾ. ರಾಜ್ ಸಿಂಗ್ ಅವರು, “ನಮ್ಮಂತೆಯೇ ಅದೇ ಮೌಲ್ಯಗಳನ್ನು ಹಂಚಿಕೊಳ್ಳುವ ಅಪ್‌ಗ್ರಾಡ್‌ನೊಂದಿಗೆ ಪಾಲುದಾರರಾಗಲು ನಮಗೆ ಸಂತೋಷವಾಗಿದೆ. ವಿಶೇಷ ಕೌಶಲ್ಯ–ಸ್ಥಾಪನೆಯ ಮನೋಭಾವ ಹೊಂದಿರುವ ಪ್ರತಿಭೆಗಳನ್ನು ಸಂಸ್ಥೆಗಳು ಸಕ್ರಿಯವಾಗಿ ಹುಡುಕುತ್ತಿರುವ ಸಮಯಗಳಲ್ಲಿ ನಾವು ಕಾರ್ಯ ನಿರ್ವಹಿಸುತ್ತೇವೆ, ಅದು ಕಾರ್ಯಪಡೆಗೆ ಮೌಲ್ಯವನ್ನು ಸೇರಿಸುತ್ತದೆ. ಆದ್ದರಿಂದ, ಸರಿಯಾದ ವಿಶೇಷತೆಯು ನಿಮ್ಮನ್ನು ಸರಳ ಉದ್ಯಮದ ವೃತ್ತಿಪರರಿಗಿಂತ ಡೊಮೇನ್ ತಜ್ಞರನ್ನಾಗಿ ಮಾಡುತ್ತದೆ. ಎರಡೂ ಕೋರ್ಸ್‌ಗಳನ್ನು ವಿನ್ಯಾಸಗೊಳಿಸಿದ್ದು ಇದನ್ನು ಗಮನದಲ್ಲಿಟ್ಟುಕೊಂಡು ಭವಿಷ್ಯಕ್ಕೆ ಸಜ್ಜಾಗುವವರನ್ನು ಸಜ್ಜುಗೊಳಿಸುತ್ತೇವೆ” ಎಂದು ಹೇಳಿದರು.

# ಕೊರೋನಾದಿಂದ ಪಾರಾಗಲು ಲಸಿಕೆಯೊಂದೇ ರಾಮಬಾಣ

### ಬಿಬಿಎಂಪಿ ಮಾಜಿ ಸದಸ್ಯರಾದ ಎಂಟಿಬಿ ರಾಜೇಶ್ ಅಭಿಪ್ರಾಯ

**ಹೊಸಕೋಟೆ:** ಕೊರೊನಾ ಎಂಬ ಮಹಾಮಾರಿ ನಮ್ಮ ದೇಶದಿಂದ ತೊಲಗಿ, ನಮ್ಮ ದೇಶ, ನಮ್ಮ ರಾಜ್ಯ ಹಾಗು ನಮ್ಮ ತಾಲ್ಲೂಕಿನ ಜನ ಆರೋಗ್ಯದಿಂದ ಸುಖ ಸಂತೋಷದಿಂದ ಬದುಕಲಿ ಎಂಬ ನಿಟ್ಟಿನಲ್ಲಿ ಸಚಿವರದಾರ ಎಂಟಿಬಿ ನಾಗರಾಜಣ್ಣನವರು ತಮ್ಮ ಸ್ವಂತ ಹಣದಿಂದ ಉಚಿತವಾಗಿ ಪ್ರತಿ ಗ್ರಾಮಗಳಿಗೂ ಲಸಿಕೆ ನೀಡುತ್ತಿದ್ದು ಪ್ರತಿಯೊಬ್ಬರು ತಪ್ಪದೆ ಲಸಿಕೆ ಹಾಕಿಸಿಕೊಳ್ಳಬೇಕು ಎಂದು ಬಿಬಿಎಂಪಿ ಮಾಜಿ ಸದಸ್ಯರಾದ ಎಂಟಿಬಿ ರಾಜೇಶ್ ತಿಳಿಸಿದ್ದಾರೆ.

ಹೌದು ಹೊಸಕೋಟೆ ತಾಲ್ಲೂಕಿನ ವಾಗಟ ಗ್ರಾಮದ ವರದರಾಜಸ್ವಾಮಿ ದೇವಾಲಯದ ಆವರಣದಲ್ಲಿ ಪಂಚಾಯ್ತಿ ವ್ಯಾಪ್ತಿಯ 5 ಗ್ರಾಮಗಳ ಬಡ ಜನರಿಗೆ ಕೊರೊನಾ ಲಸಿಕೆ ಹಾಕಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕೊರೊನಾ ಎಂಬ ಮಹಾಮಾರಿ ಇಡೀ ದೇಶದಲ್ಲೇ ಆವರಿಸಿದ್ದು ಜನ ತತ್ತರಿಸಿ ಹೋಗಿದ್ದಾರೆ ಅದರಂತೆ ನಮ್ಮ ಹೊಸಕೋಟೆ ತಾಲ್ಲೂಕಿನಲ್ಲಿ ಸುಮಾರು 280 ಕ್ಕೂ ಹೆಚ್ಚು ಜನ ಪ್ರಾಣ ಬಿಟ್ಟಿದ್ದಾರೆ. ಇದನ್ನು ತಡೆ ಗಟ್ಟಲು ಮಾನ್ಯ ಪೌರಾಡಳಿತ ಹಾಗು ಸಕ್ಕರೆ ಸಚಿವರದಾ ಎಂಟಿಬಿ ನಾಗರಾಜಣ್ಣನವರು ತಮ್ಮ ಸ್ವಂತ ಹಣದಿಂದ ತಾಲ್ಲೂಕಿನ ಪ್ರತಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಪ್ರತಿ ಹಳ್ಳಿಗಳಲ್ಲಿ ಉಚಿತ ಕೊರೋನಾ ಲಸಿಕೆ ಹಾಕಿಸುತ್ತಿದ್ದು ಈಗಾಗಲೆ 15 ಪಂಚಾಯ್ತಿಗಳಲ್ಲಿ ಲಸಿಕೆ ಸಂಪೂರ್ಣವಾಗಿ ಹಾಕಿಸಿದ್ದಾರೆ ಅದರಂತೆ ಇಂದು ವಾಗಟ ಗ್ರಾಮ ಪಂಚಾಯ್ತಿ ವ್ಯಾಪ್ತಿಯ 5 ಗ್ರಾಮಗಳಿಗೂ ಲಸಿಕೆ ನೀಡುತ್ತಿದ್ದು ಪ್ರತಿಯೊಬ್ಬರು ತಪ್ಪದೆ ಲಸಿಕೆ ಹಾಕಿಸಿಕೊಳ್ಳಬೇಕು ಎಂದರು.

ನಂತರ ಬಿಜೆಪಿ ಯುವ ಮುಖಂಡ ಕೋಡಿ ಹಳ್ಳಿ ಜನಾರ್ಧನ್ ಮಾತನಾಡಿ, ಕೊರೊನಾ



ಎಂಬ ಮಹಾಮಾರಿ ಇಡೀ ದೇಶದಲ್ಲೇ ಆವರಿಸಿದ್ದು ಹೊಸಕೋಟೆಯ ಜನರು ಸಹ ಸಂಕಷ್ಟಕ್ಕೆ ಸಿಲುಕಿದ್ದಾರೆ ಆದ್ದರಿಂದ ಕೊರೊನಾ ಮಹಾಮಾರಿಯಿಂದ ಮುಕ್ತರಾಗಲು ಎಂಟಿಬಿ ನಾಗರಾಜುರವರು ತಮ್ಮ ಸ್ವಂತ ಹಣದಿಂದ ತಾಲ್ಲೂಕಿನ ಪ್ರತಿ ಗ್ರಾಮಕ್ಕೂ ಉಚಿತ ಕೊರೊನಾ ಲಸಿಕೆ ನೀಡುತ್ತಿದ್ದು ಇಂದು ವಾಗಟ ಪಂಚಾಯ್ತಿಯ 5 ಗ್ರಾಮಗಳಲ್ಲಿ ಲಸಿಕೆ ನೀಡುತ್ತಿದ್ದಾರೆ.

ಈ ಕಾರ್ಯಕ್ರಮಕ್ಕೆ ಎಂಟಿಬಿ ನಾಗರಾಜು ರವರ ಸುಪುತ್ರ ಎಂಟಿಬಿ ರಾಜೇಶ್‌ರವರು ಆಗಮಿಸಿ ಲಸಿಕೆಗೆ ಚಾಲನೆ ನೀಡಿದ್ದಾರೆ. ಆದ್ದರಿಂದ ನಮ್ಮ ವಾಗಟ ಪಂಚಾಯ್ತಿ ಪರವಾಗಿ ಈ ಬಾಗದ ಎಲ್ಲಾ ಮುಖಂಡರ ಸಾರ್ವಜನಿಕರ ಪರವಾಗಿ ನಾವು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇವೆ ಎಂದರು.

ಕಾರ್ಯಕ್ರಮದಲ್ಲಿ ಬಿಎಂಆರ್‌ಡಿಎ ಅಧ್ಯಕ್ಷ ಚನ್ನಸಂದ್ರ ನಾಗರಾಜು, ಯುವ ಮೋರ್ಚಾ ಅಧ್ಯಕ್ಷ ತವಟಹಳ್ಳಿ ರಾಮು, ಕುರುಬರ ಸಂಘದ ಅಧ್ಯಕ್ಷ ರಘುವೀರ್, ಗ್ರಾಮ ಪಂಚಾಯ್ತಿ ಸದಸ್ಯ ಸುರೇಶ್, ಮುಖಂಡರಾದ ಮಂಜುನಾಥ್, ಸೇರಿದಂತೆ ಇತರೆ ಮುಖಂಡರು ಹಾಜರಿದ್ದರು.